## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಮಾರತ್‌ಹಳ್ಳಿ ಉಪ ವಿಭಾಗ,
ಮಹದೇವಪುರ ವಲಯ, ಕೃಷ್ಣಾ ಶೈನ್ ಕಟ್ಟಡ, ಮಾರತ್‌ಹಳ್ಳಿ ಬ್ರಿಡ್ಜ್ ಹತ್ತಿರ, ಬೆಂಗಳೂರು:560 037.

ಸಂ: ಬಿಬಿಎಂಪಿ/ಸಕಾಅ/ಮಾಉವಿ/ವಾ150/ಪಿ.ಆರ್/104/2022-23 ದಿನಾಂಕ: 19/08/2022

### ಸಭೆಯ ಆಹ್ವಾನ ಪತ್ರ

ಮಾನ್ಯ ಆಯುಕ್ತರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21, ದಿನಾಂಕ:02.10.2020ರಂತೆ ವಾರ್ಡ್ ನಂ.150 ಬೆಳ್ಳಂದೂರು ವ್ಯಾಪ್ತಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ.

ಮುಂದುವರೆದಂತೆ ದಿನಾಂಕ:20.08.2022 ರಂದು ಶನಿವಾರ ಮಧ್ಯಾಹ್ನ:03.30 ಘಂಟೆಗೆ ಸರಿಯಾಗಿ ವಾರ್ಡ್ ನಂ.150 ಬೆಳ್ಳಂದೂರು, ಸಹಾಯಕ ಅಭಿಯಂತರರ ವಾರ್ಡ್ ಕಛೇರಿ ಇಲ್ಲಿ ನೋಡೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ನಂ.150ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು, ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವ ಕೆಲಸಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ, ಇತರೆ ವಿಷಯಗಳ ಬಗ್ಗೆ ಚರ್ಚಿಸಲು ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಾಗೂ ಸದಸ್ಯರು ತಪ್ಪದೇ ಈ ಸಭೆಗೆ ಹಾಜರಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಈ ಮೂಲಕ ತಿಳಿಯಪಡಿಸಿದೆ.

-: ಸಭೆಯ ಅಜೆಂಡಾ :-

| | |
|---|---|
| 1 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ -19 ಟೆಸ್ಟ್‌ಗಳ ನಿರ್ವಹಣೆ ಬಗ್ಗೆ. |
| 2 | ವಾರ್ಡ್ ವ್ಯಾಪ್ತಿಯಲ್ಲಿನ ತೆರಿಗೆ ಸಂಗ್ರಹಣೆಯ ಬಗ್ಗೆ. |
| 3 | ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆ/ಚರಂಡಿಗಳ ದುರಸ್ಥಿಯನ್ನು ಕೈಗೊಳ್ಳುವ ಬಗ್ಗೆ. |
| 4 | ಬೀದಿ ದೀಪಗಳ ನಿರ್ವಹಣೆ ಕುರಿತು. |
| 5 | ವಾರ್ಡ್ ವ್ಯಾಪ್ತಿಯಲ್ಲಿನ ಸ್ಯಾನಿಟರಿ ದೂರುಗಳ ಬಗ್ಗೆ. |
| 6 | ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ. |
| 7 | ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚಿಸುವ ವಿಚಾರ. |
| 8 | ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಬಗ್ಗೆ. |
| 9 | ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಚಾರಗಳು. |

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ರವರಿಗೆ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರತ್ತಹಳ್ಳಿ ಉಪವಿಭಾಗ ರವರಿಗೆ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ ರವರಿಗೆ ಸಲ್ಲಿಸಿದೆ.
5. ಸಹ ಕಂದಾಯ ಅಧಿಕಾರಿಗಳು, ಮಾರತ್ತಹಳ್ಳಿ ಉಪವಿಭಾಗ ರವರಿಗೆ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ ರವರಿಗೆ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಕಸವನಹಳ್ಳಿ ರವರಿಗೆ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಕಾಡುಬೀಸನಹಳ್ಳಿ ರವರಿಗೆ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ಬಿಬಿಎಂಪಿ ರವರಿಗೆ ಸಲ್ಲಿಸಿದೆ.
10. ಪೋಲೀಸ್ ಅಧಿಕಾರಿಗಳು ಬೆಳ್ಳಂದೂರು/ಮಾರತ್ತಹಳ್ಳಿ ಪೋಲೀಸ್ ಠಾಣೆ ರವರಿಗೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸಲ್ಲಿಸಿದೆ.
12. ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ ವಿಭಾಗ, ಜಯನಗರ, ಬಿ.ಡಿ.ಎ ಕಾಂಪ್ಲೆಕ್ಸ್ ರವರಿಗೆ ಸಲ್ಲಿಸಿದೆ.
13. ಪಶುಸಂಗೋಪನಾ ಇಲಾಖೆ ಬಿಬಿಎಂಪಿ ರವರಿಗೆ ಸಲ್ಲಿಸಿದೆ.
14. ಪರಿಸರ ಇಲಾಖೆ, ಬಿಬಿಎಂಪಿ ರವರಿಗೆ ಸಲ್ಲಿಸಿದೆ.
15. ತೋಟಗಾರಿಕೆ ಇಲಾಖೆ ಬಿಬಿಎಂಪಿ ರವರಿಗೆ ಸಲ್ಲಿಸಿದೆ.
16. ಆರಕ್ಷಕ ವೃತ್ತ ನಿರೀಕ್ಷಕರು (ಸಂಚಾರ) ಹೆಚ್.ಎಸ್.ಆರ್ ಲೇಔಟ್ ರವರಿಗೆ.

Scanned with CamScanner

17. RWA/NGO's Of Bellandur. ಹಾಗೂ ವಾರ್ಡ್ ಕಮಿಟಿ ಸದಸ್ಯರುಗಳು.

18. ವಾರ್ಡಿನ ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.150 ಬೆಳ್ಳಂದೂರು ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.

19. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ದೊಡ್ಡಕನ್ನೆಲ್ಲಿ ರವರ ಮಾಹಿತಿಗಾಗಿ ಸಲ್ಲಿಸಿದೆ.

20. ಸಹ ಕಂದಾಯ ಅಧಿಕಾರಿಗಳು, ಮಾರತ್ತಹಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರು ರವರ ಮಾಹಿತಿಗಾಗಿ ಸಲ್ಲಿಸಿದೆ.

21. ವಾರ್ಡ್ ಕಛೇರಿ ಪ್ರತಿ.

ಸದಸ್ಯ ಕಾರ್ಯದರ್ಶಿ
ವಾರ್ಡ್ ಕಮಿಟಿ, ವಾರ್ಡ್ ನಂ.150 ಹಾಗೂ
ಸಹಾಯಕ ಅಭಿಯಂತರರು ಬೆಳ್ಳಂದೂರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner

# " ವಾರ್ಡ್ ಕಮಿಟಿ ಸಭೆಯ ಹಾಜರಾತಿ"

ದಿನಾಂಕ: 20.08.2022 ರಂದು ಶನಿವಾರ ಮಧ್ಯಾಹ್ನ:03.30 ಗಂಟೆಗೆ ಸರಿಯಾಗಿ ವಾರ್ಡ್ ನಂ.150 ಬೆಳ್ಳಂದೂರು. ಬಿಬಿಎಂಪಿ ವಾರ್ಡ್ ಕಛೇರಿ ಇಲ್ಲಿ ವಾರ್ಡ್ ಕಮಿಟಿ ಸಭೆಯ ನೋಡಲ್ ಅಧಿಕಾರಿ ಶ್ರೀ.ವಿ.ಗೋವಿಂದರಾಜು ರವರು ಅಧ್ಯಕ್ಷತೆ ವಹಿಸಿದ್ದು. ಸದರಿ ಸಭೆಯಲ್ಲಿ ಹಾಜರಿದ್ದ ಕಮಿಟಿಯ ಸದಸ್ಯರುಗಳು ಹಾಗೂ ಅಧಿಕಾರಿಗಳು:

| ಕ್ರ.ಸಂ | ಅಧಿಕಾರಿಗಳು | ಹುದ್ದೆ | ದೂರವಾಣಿ ಸಂಖ್ಯೆ | ಸಹಿ |
|---|---|---|---|---|
| 1 | SURESHA L | BWSSB Junior engineer | 8431589477 | [signature] |
| 2 | HARISH. V | ~~[illegible]~~ .THI | 8105132625 | [signature] |
| 3 | LOKESH | Bellandur Main Road | 9901244997 | [signature] |
| 4 | Rupert Ralph | Lakedew Residency | 9980141378 | [signature] |
| 5 | Nagalakshmi V | UPHC Doddakannelli | 9886827701 | [signature] |
| 6 | Valli S. | CPP volunteer | 9731596141 | [signature] |
| 7 | Anjali (Anganwadi) | | 7406204471 | [signature] |
| 8 | Bhaveetha. | Electoral? | 9606470984 | [signature] |
| 9 | | | | |
| 10 | | | | |
| 11 | | | | |
| 12 | | | | |
| 13 | | | | |
| 14 | | | | |
| 15 | | | | |
| 16 | | | | |
| 17 | | | | |
| 18 | | | | |
| 19 | | | | |
| 20 | | | | |

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಮಾರತ್‌ಹಳ್ಳಿ ಉಪ ವಿಭಾಗ,
ಮಹದೇವಪುರ ವಲಯ, ಕೃಷ್ಣಾ ಶೈನ್ ಕಟ್ಟಡ, ಮಾರತ್‌ಹಳ್ಳಿ ಬ್ರಿಡ್ಜ್ ಹತ್ತಿರ, ಬೆಂಗಳೂರು: 560 037.

ಸಂ: ಬಿಬಿಎಂಪಿ/ಸಕಾಅ/ವಾ150/ಪಿ.ಆರ್/104/2022-23 ದಿನಾಂಕ: 20.08.2022

## 150 ಬೆಳ್ಳಂದೂರು ವಾರ್ಡ್ ಸಮಿತಿ ಸಭೆಯ ನಡವಳಿಗಳು:

.........

ದಿನಾಂಕ:-20/08/2022ರ ಶನಿವಾರ ಮಧ್ಯಾಹ್ನ: 3.30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ.ವಿ.ಗೋವಿಂದರಾಜು ನೋಡಲ್ ಅಧಿಕಾರಿರವರ ಅನುಪಸ್ಥಿತಿಯಲ್ಲಿ ಕಾರ್ಯದರ್ಶಿಗಳು ವಾರ್ಡ್ ಸಭೆಯನ್ನು ನಡೆಸಲಾಗಿ, ಸದರಿ ಸಭೆಯ ನಡವಳಿಗಳು ಈ ಕೆಳಕಂಡತ್ತಿವೆ:-

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಸದಸ್ಯರು, ವಾರ್ಡ್ ಲೇಔಟ್ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು, ಸ್ಥಳೀಯ ನಿವಾಸಿಗಳು ಹಾಗೂ ಅಧಿಕಾರಿಗಳು:-**

| ಕ್ರ. ಸಂ | ವಾರ್ಡ್ ಕಮಿಟಿ ಸದಸ್ಯರುಗಳು/ಅಧಿಕಾರಿಗಳು | ಹುದ್ದೆ | ದೂರವಾಣಿ ಸಂಖ್ಯೆ | ಷರಾ |
|---|---|---|---|---|
| 1 | ಶ್ರೀ.ಸುರೇಶ್ ಎಲ್ | ಕಿರಿಯ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ) | 8431589477 | ಹಾಜರಿ |
| 2 | ಶ್ರೀ.ಹರೀಶ್ | ಕಿರಿಯ ಆರೋಗ್ಯಪರಿವೀಕ್ಷಕರು | 8105132695 | ಹಾಜರಿ |
| 3 | ಶ್ರೀಮತಿ.ನಾಗಲಕ್ಷ್ಮಿ | ಯು.ಪಿ.ಹೆಚ್.ಸಿ ದೊಡ್ಡಕನ್ನೆಲ್ಲಿ | 9886827701 | ಹಾಜರಿ |
| 4 | ಶ್ರೀ.ಭರತ್ | ಎಲೆಕ್ಟ್ರಿಕಲ್ | 9606470984 | |
| 5 | ಶ್ರೀಮತಿ.ರೂಪಾಲಿ ರಾಲ್ಪ್ | ಸ್ಥಳೀಯ ನಿವಾಸಿಗಳು | 9980141378 | ಹಾಜರಿ |
| 6 | ಶ್ರೀಮತಿ.ವಲ್ಲಿ.ಎಸ್ | ಸ್ಥಳೀಯ ನಿವಾಸಿಗಳು | 9731596141 | ಹಾಜರಿ |
| 7 | ಶ್ರೀಮತಿ.ಅನ್ಸಾಲಿ | ಸ್ಥಳೀಯ ನಿವಾಸಿಗಳು | 7406204471 | ಹಾಜರಿ |
| 8 | ಶ್ರೀ.ಲೋಕೇಶ್ | ಸ್ಥಳೀಯ ನಿವಾಸಿಗಳು | 9901244997 | ಹಾಜರಿ |

ಶ್ರೀ.ಚೇತನ್.ಕೆ.ಎಂ ಕಾರ್ಯದರ್ಶಿಗಳು ವಾರ್ಡ್-150 ಬೆಳ್ಳಂದೂರು ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ವಾರ್ಡ್‌ನ ಕುಂದು ಕೊರತೆಗಳನ್ನು ಚರ್ಚಿಸುವುದಾಗಿ ತಿಳಿಸಿದರು.

**1. ಬೃಹತ್ ನೀರುಗಾಲುವೆ ಬಗ್ಗೆ:**

ವಾರ್ಡ್ ವ್ಯಾಪ್ತಿಯಲ್ಲಿ ಟ್ರಿನಿಟಿ ಅಪಾರ್ಟ್‌ಮೆಂಟ್ ಬಳಿಯಲ್ಲಿ ರಾಜಕಾಲುವೆ ಒತ್ತುವರಿಯಾಗಿರುವುದರಿಂದ ಅಪಾರ್ಟ್‌ಮೆಂಟ್ ಒಳಗೆ ನೀರು ನುಗ್ಗುತ್ತಿರುವ ಬಗ್ಗೆ ಅಲ್ಲಿನ ನಿವಾಸಿಗಳು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯವು ರಾಜಕಾಲುವೆ ವಿಭಾಗಕ್ಕೆ ಸಂಬಂಧಿಸಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರಾದ ಕಾರಣ ವಾರ್ಡ್ ಕಾರ್ಯದರ್ಶಿಗಳು ಸದರಿ ಅಧಿಕಾರಿಗಳಿಗೆ ಕ್ರಮವಹಿಸುವಂತೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸುವುದಾಗಿ ಈ ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಯಿತು.

ಮುಂದುವರೆದು ಆರ್.ಬಿ.ಡಿ ಬಡಾವಣೆಯಿಂದ ಸರ್ಜಾಪುರ ರಸ್ತೆಯವರೆಗೆ ಹಾದುಹೋಗುವ ಬೃಹತ್ ನೀರುಗಾಲುವೆಯಲ್ಲಿ ಒಳಚರಂಡಿ ನೀರು ಮಿಶ್ರಣವಾಗುತ್ತಿರುವುದರಿಂದ ಸದರಿ ಬಡಾವಣೆಯಲ್ಲಿ ನೈರ್ಮಲ್ಯ ಹದಗೆಟ್ಟಿರುತ್ತದೆ ಎಂದು ತಿಳಿಸಿ ಸದರಿ ರಾಜಕಾಲುವೆಯನ್ನು, ಆರ್.ಬಿ.ಡಿ ಬಡಾವಣೆಯ ಒಳಗೆ ಸಂಪರ್ಕಿಸದೆ ಇನ್ನಿತ್ತರ ಮುಖಾಂತರ ರಾಜಕಾಲುವೆಯ ನೀರನ್ನು ಹೊರಬಿಡಲು ಸಭೆಯಲ್ಲಿ ಆರ್.ಬಿ.ಡಿ ನಿವಾಸಿಗಳು ತಿಳಿಸಲಾಗಿ, ಸದರಿ ವಿಷಯದ ಬಗ್ಗೆ ವಾರ್ಡ್ ಕಾರ್ಯದರ್ಶಿಗಳು ರಾಜಕಾಲುವೆ ವಿಭಾಗಕ್ಕೆ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

Scanned with CamScanner

**2. ಕಸ ಸಮಸ್ಯೆ ಮತ್ತು ನಿರ್ವಹಣೆ ಬಗ್ಗೆ:**

ವಾರ್ಡ್ ವ್ಯಾಪ್ತಿಯ ಕಸವನಹಳ್ಳಿ ಹರಳೂರು ಗ್ರಾಮಗಳಲ್ಲಿ ಕಸ ವಿಲೇವಾರಿ ಸಂಬಂಧ ಪ್ರಸ್ತುತ ಇರುವ ಗಾಡಿಗಳಿಂದ ಸಮರ್ಪಕವಾಗಿ ವಿಲೇವಾರಿಯಾಗುತ್ತಿರುವುದಿಲ್ಲವೆಂದು ಅಲ್ಲಿನ ನಿವಾಸಿಗಳು ತಿಳಿಸಿರುವ ಮೇರೆಗೆ ಹೆಚ್ಚಿನ ಸಖ್ಯೆಯ ಗಾಡಿಗಳನ್ನು ನೀಡಬೇಕೆಂದು ಸ್ಥಳೀಯ ನಿವಾಸಿಗಳು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು

**3. ಬೀದಿ ದೀಪ ನಿರ್ವಹಣೆ ಬಗ್ಗೆ:**

ವಾರ್ಡ್ ಸಂಖ್ಯೆ-150ರ ವ್ಯಾಪ್ತಿಯ ಓನರ್ಸ್ ಕೋರ್ಟ್ ಬಡಾವಣೆ ಹಾಗೂ ಲೇಕ್‌ಡ್ಯೂ ರೆಸಿಡೆನ್ಸಿ ಬಡಾವಣೆಗಳಲ್ಲಿ ಬೀದಿದೀಪಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ ವಾರ್ಡ್ ಸಭೆಯಲ್ಲಿ ಸ್ಥಳೀಯ ನಿವಾಸಿಗಳು ಈ ಹಿಂದೆ ನಡೆದ ಸಭೆಯಲ್ಲಿ ತಿಳಿಸಿರುತ್ತಾರೆ. ಮುಂದುವರೆದು ಸದರಿ ವಿಷಯದ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳುವುದಾಗಿ ಬೀದಿ ದೀಪ ನಿರ್ವಹಣಾ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಮುಂದುವರೆದು ಎಲ್.ಎ.ಡಿ ದೀಪಗಳನ್ನು ಅಳವಡಿಸಲು ಇನ್ನು 2 ತಿಂಗಳ ಕಾಲಾವಕಾಶ ಬೇಕಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು.

**4. ಬಿಡಬ್ಲ್ಯೂಎಸ್‌ಎಸ್‌ಬಿ ಸಮಸ್ಯೆಗಳ ಬಗ್ಗೆ:**

ವಾರ್ಡ್ ವ್ಯಾಪ್ತಿಯಲ್ಲಿ ಬೆಳ್ಳಂದೂರು ಹೊರವಲಯ ರಸ್ತೆಯ ಸೆಂಟ್ರಲ್‌ಮಾಲ್ ಎದುರು ಮ್ಯಾನ್‌ಹೋಲ್ ದುರಸ್ಥಿಗೊಂಡಿದ್ದು, ಒಳಚರಂಡಿ ನೀರು ರಸ್ತೆಯ ಹರಿಯುತ್ತಿದ್ದು, ಅಲ್ಲಿನ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಸ್ಥಳೀಯ ನಿವಾಸಿಗಳು ಸಭೆಯಲ್ಲಿ ತಿಳಿಸಿದರು. ಗ್ರೀನ್‌ಗ್ಲೆನ್ ಬಡಾವಣೆಯಲ್ಲಿ ಪ್ರಗತಿಯಲ್ಲಿರುವ ಯು.ಜಿ.ಡಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಿ ರಸ್ತೆಯನ್ನು ಸುಸ್ಥಿಗೆ ಮರಳಿಸಲು ಅಲ್ಲಿನ ನಿವಾಸಿಗಳು ಸಭೆಯಲ್ಲಿ ಕೋರಿದರು. ಮುಂದುವರೆದು ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ವಾರ್ಡ್ ಸಭೆಯಲ್ಲಿ ಹಾಜರಿದ್ದ ಬಿಡಬ್ಲ್ಯೂಎಸ್‌ಎಸ್‌ಬಿ ವಿಭಾಗದ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಲಾಗಿರುತ್ತದೆ. ಮುಂದುವರೆದು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರಾದ ಕಾರಣ ವಾರ್ಡ್ ಕಾರ್ಯದರ್ಶಿಗಳು ಸದರಿ ಅಧಿಕಾರಿಗಳಿಗೆ ಕ್ರಮವಹಿಸುವಂತೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

**5. ಬೆಸ್ಕಾಂ ಇಲಾಖೆಯ ವಿಷಯಗಳ ಬಗ್ಗೆ:**

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಗ್ರೀನ್‌ಗ್ಲೆನ್ ಲೇಔಟ್ ಬಡಾವಣೆಯಲ್ಲಿ ಕಂಬದ ಕೆಳಗೆ ಕೇಬಲ್‌ಗಳನ್ನು ಅಲ್ಲಿಯೇ ಬಿಟ್ಟಿರುವುದನ್ನು ತೆರವುಗೊಳಿಸಿ ಕೇಬಲ್ ಅಳವಡಿಸಿದ ಸ್ಥಳಗಳಲ್ಲಿ ರಸ್ತೆಯನ್ನು ಸುಸ್ಥಿಗೆ ಮರಳಿಸಲು ಗ್ರೀನ್‌ಗ್ಲೆನ್ ಲೇಔಟ್‌ನ ನಿವಾಸಿಗಳು ಈ ಹಿಂದೆ ನಡೆದ ಸಭೆಯಲ್ಲಿ ತಿಳಿಸಿದರು. ಮುಂದುವರೆದು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರಾದ ಕಾರಣ ವಾರ್ಡ್ ಕಾರ್ಯದರ್ಶಿಗಳು ಸದರಿ ಅಧಿಕಾರಿಗಳಿಗೆ ಕ್ರಮವಹಿಸುವಂತೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

**6. ರಸ್ತೆ ಮೂಲಭೂತ ಸೌಕರ್ಯ ಇಲಾಖೆಯ ವಿಷಯಗಳ ಬಗ್ಗೆ:**

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಸರ್ಜಾಪುರ ರಸ್ತೆಯಲ್ಲಿ ಬೀದಿದೀಪ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಸ್ಥಳೀಯ ನಿವಾಸಿಗಳು ಈ ಹಿಂದಿನ ಸಭೆಯಲ್ಲಿ ತಿಳಿಸಿದರು. ಟ್ರಿನಿಟಿ ಅಪಾರ್ಟ್‌ಮೆಂಟ್ ಮುಂದೆ ಬರುವ ಸರ್ಜಾಪುರ ರಸ್ತೆಯ ಚರಂಡಿಯಲ್ಲಿರುವ ಹೂಳು ತೆಗೆದು ಮಣಿಪಾಲ್ ಆಸ್ಪತ್ರೆಯ ವರೆಗೆ ಮೋರಿಯ ನೀರನ್ನು ಸುಗಮವಾಗಿ ಹರಿಯುವಂತೆ ಮಾಡಿಕೊಡುವಂತೆ ಸಭೆಯಲ್ಲಿ ತಿಳಿಸಿದರು. ಮುಂದುವರೆದು ಬೆಳ್ಳಂದೂರು ಹೊರವಲಯದ ಸರ್ವೀಸ್ ರಸ್ತೆಯ ಬದಿಯಲ್ಲಿರುವ ಚರಂಡಿಯ ಹೂಳನ್ನು ತೆಗೆಯುವಂತೆ ಬೆಳ್ಳಂದೂರು ನಿವಾಸಿಗಳು ಈ ಹಿಂದೆ ನಡೆದ ಸಭೆಯಲ್ಲಿ ತಿಳಿಸಿರುತ್ತಾರೆ. ಮುಂದುವರೆದು ಪ್ರಸ್ತುತ ಬೆಳ್ಳಂದೂರು ಮುಖ್ಯರಸ್ತೆಯಿಂದ ಸರ್ಜಾಪುರ ರಸ್ತೆಯ ವರೆಗೆ ಹಾಗೂ ಕಸವನಹಳ್ಳಿ ರಸ್ತೆಯಲ್ಲಿ ರಸ್ತೆಯು ಹದಗೆಟ್ಟಿದ್ದು, ಸದರಿ ರಸ್ತೆಯನ್ನು ದುರಸ್ಥಿಪಡಿಸಲು ಸಭೆಯಲ್ಲಿ ತಿಳಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರಾದ ಕಾರಣ ವಾರ್ಡ್ ಕಾರ್ಯದರ್ಶಿಗಳು ಸದರಿ ಅಧಿಕಾರಿಗಳಿಗೆ ಕ್ರಮವಹಿಸುವಂತೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

Scanned with CamScanner

**7. ಸಂಚಾರಿ ಪೋಲಿಸ್ ಇಲಾಖೆಯ ವಿಷಯಗಳ ಬಗ್ಗೆ:**

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಬೆಳ್ಳಂದೂರು ಮುಖ್ಯರಸ್ತೆ (ಮದರ್‌ವುಡ್ ರಸ್ತೆಯಲ್ಲಿ ನೋ ಪಾರ್ಕಿಂಗ್ ನಾಮಫಲಕಗಳನ್ನು ಅಳವಡಿಸಿ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಅಲ್ಲಿನ ನಿವಾಸಿಗಳು ಈ ಹಿಂದಿನ ಸಭೆಯಲ್ಲಿ ತಿಳಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರಾದ ಕಾರಣ ವಾರ್ಡ್ ಕಾರ್ಯದರ್ಶಿಗಳು ಸದರಿ ಅಧಿಕಾರಿಗಳಿಗೆ ಕ್ರಮವಹಿಸುವಂತೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

**8.ವಾರ್ಡ್ ಕಾಮಗಾರಿ ಹಾಗೂ ರಸ್ತೆ ಮೂಲಭೂತ ಸೌಕರ್ಯ ಇಲಾಖೆಯ ವಿಷಯಗಳ ಬಗ್ಗೆ:**

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಲೇಕ್ ಡ್ಯೂ ರೆಸಿಡೆನ್ಸಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ತುರ್ತಾಗಿ ಅಸ್ಫಾಲ್ಟ್ ಪದರವನ್ನು ಹಾಕಬೇಕೆಂದು ಸಭೆಯಲ್ಲಿ ಸ್ಥಳೀಯ ನಿವಾಸಿಗಳು ತಿಳಿಸಿದರು, ಹಾಗೂ ಓನರ್ಸ್ ಕೋರ್ಟ್ ಈಸ್ಟ್ ಬಡಾವಣೆಯಲ್ಲಿ 4ನೇ ಅಡ್ಡರಸ್ತೆಯನ್ನು ಅಭಿವೃದ್ಧಿಗೊಳಿಸಬೇಕಾಗಿ ಸ್ಥಳೀಯ ನಿವಾಸಿಗಳು ಸಭೆಯಲ್ಲಿ ತಿಳಿಸಿದರು, ಸದರಿ ವಿಷಯದ ಸಂಬಂಧ ವಾರ್ಡ್ ಇಂಜಿನಿಯರ್ ರವರು ಕ್ರಮ ಕೈಗೊಳ್ಳಲಾಗುವುದಾಗಿ ಸಭೆಯಲ್ಲಿ ತಿಳಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು. ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಮತ್ತು ಸಹಾಯಕ ಅಭಿಯಂತರರು
ವಾರ್ಡ್ ನಂ. 150 ಬೆಳ್ಳಂದೂರು.

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ಬಿಬಿಎಂಪಿ ರವರ ಅವಹಾಗನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.


Scanned with CamScanner









Scanned with CamScanner




Scanned with CamScanner







Scanned with CamScanner